# ಪ್ರಾರ್ಥನೆ

# ಶ್ರೀಶಾರದಾದೇವೀ ಸ್ತೋತ್ರಮ್ - ೨



**ರಾಮಕೃಷ್ಣನಾಮಮುಗ್ಧತತ್ಸುಧಾಕಥಾಪ್ರಿಯಾಂ**
**ರಾಮಕೃಷ್ಣಲುಪ್ತಚಿತ್ತಸರ್ವಕಾಮವರ್ಜಿತಾಮ್ ।**
**ವಿಶ್ವಲೋಕಪೂಜ್ಯನಿತ್ಯಸಿದ್ಧಸಾಧಿಕಾಸತೀಂ**
**ತಾಂ ನಮಾಮಿ ಸಾರದಾಂ ಹಿ ವಿಶ್ವಮಾತೃರೂಪಿಣೀಮ್ ॥ ೪ ॥**

'ಶ್ರೀರಾಮಕೃಷ್ಣ'ರ ನಾಮವನ್ನು ಕೇಳಿದ ಮಾತ್ರದಿಂದಲೇ ತನ್ಮಯರಾಗುವ, ಅವರ ಅಮೃತಕಥೆಯನ್ನು ಕೇಳುವುದರಲ್ಲಿ ಪ್ರೀತಿಯನ್ನು ಹೊಂದಿರುವ, ಶ್ರೀರಾಮಕೃಷ್ಣರಿಗೆ ಅರ್ಪಿಸಿದ ಚಿತ್ತವುಳ್ಳವರಾಗಿ ಸರ್ವಕಾಮರಹಿತಳಾಗಿರುವ, ಪ್ರಪಂಚದ ಎಲ್ಲಾ ಜನರಿಂದ ಪೂಜಿಸಲ್ಪಡುವ, ಸದಾ ಸಾಧನೆಯಲ್ಲೇ ನಿರತರಾಗಿರುವ ಪತಿವ್ರತೆಯಾದ ವಿಶ್ವದ ಜನನಿ ಆ ಶಾರದಾಮಾತೆಗೆ ನಮಸ್ಕರಿಸುತ್ತೇನೆ.

**ಭರ್ತೃದೇವರಾಮಕೃಷ್ಣಶೇಷಕರ್ಮಸಾಧಿಕಾಂ**
**ದೀರ್ಘಕಾಲಪುಣ್ಯಯೋಗಪೂರ್ಣಸಿದ್ಧಿಕಾರಿಕಾಮ್ ।**
**ಪ್ರಾಪ್ತಸರ್ವಯೋಗಸಿದ್ಧಿಪೂರ್ಣಕಾಮಮಾತರಂ**
**ತಾಂ ನಮಾಮಿ ಸಾರದಾಂ ಹಿ ವಿಶ್ವಮಾತೃರೂಪಿಣೀಮ್ ॥ ೫ ॥**

ಪತಿ ಶ್ರೀರಾಮಕೃಷ್ಣರು ಉಳಿಸಿದ್ದ ಎಲ್ಲಾ ಕೆಲಸಗಳನ್ನೂ ನೆರವೇರಿಸಿದ, ದೀರ್ಘಕಾಲದ ಪುಣ್ಯಗಳಿಗೆ ಯೋಗ್ಯವಾದ ಪೂರ್ಣಸಿದ್ಧಿಯನ್ನು ಕರುಣಿಸುವ, ಎಲ್ಲಾ ಯೋಗಗಳ ಸಿದ್ಧಿಯನ್ನೂ ಪಡೆದ, ಯಾವ ಆಸೆಯೂ ಇಲ್ಲದ ತಾಯಿ, ವಿಶ್ವಮಾತೆ, ಶಾರದೆಗೆ ನಮಸ್ಕರಿಸುತ್ತೇನೆ.

**ಗೇಹಿಕೃತ್ಯಗೇಹಕರ್ಮನೀತಿಧರ್ಮದೇಶಿಕಾಂ**
**ತ್ಯಾಗಿಸೇವ್ಯದಿವ್ಯಧರ್ಮಕಾಯಚಿತ್ತಮಂಡಿತಾಮ್ ।**
**ಕೋಟಿಭಕ್ತಕಂಠಗೀತಮಾತೃನಾಮವಂದಿತಾಂ**
**ತಾಂ ನಮಾಮಿ ಸಾರದಾಂ ಹಿ ವಿಶ್ವಮಾತೃರೂಪಿಣೀಮ್ ॥ ೬ ॥**

ಗೃಹಿಣಿಯರಿಗೆ ಅಗತ್ಯವಾದ ಗೃಹನೀತಿಯನ್ನು ಬೋಧಿಸಿದ, ಸಂನ್ಯಾಸಿಗಳೂ ಸೇವಿಸುವಂತಹ ದಿವ್ಯವಾದ ಪವಿತ್ರ ಶರೀರ ಧಾರಿಣಿಯಾದ, ಕೋಟಿ ಕೋಟಿ ಸಂಖ್ಯೆಯ ಭಕ್ತರು ಯಾವ ತಾಯಿಯ ಗೀತಾಮೃತವನ್ನೂ ನಾಮಾಮೃತವನ್ನೂ ಹಾಡುತ್ತಾ, ವಂದಿಸುವರೋ ಅಂತಹ ಜಗಜ್ಜನನಿ ಮಾತೆ ಶಾರದೆಗೆ ವಂದಿಸುತ್ತೇನೆ.

— ಸ್ವಾಮಿ ಜೀವಾನಂದ

## ಸೂಕ್ತಿಪ್ರಭ

## ಸ್ವಾಮೀಜಿ ಸೂಕ್ತಿಗಳು

ಬಡವರ ಗೋಳಿಗೆ ಯಾರ ಹೃದಯ ರಕ್ತ ಸುರಿಸುವುದೋ ಅವನನ್ನು ಮಹಾತ್ಮನೆಂದು ಕರೆಯುತ್ತೇನೆ. ಇಲ್ಲದೇ ಇದ್ದರೆ ಅವನು ದುರಾತ್ಮ. ಎಲ್ಲಿಯವರೆಗೂ ಉಪವಾಸದಲ್ಲಿ ಅಜ್ಞಾನದಲ್ಲಿ ಕೋಟ್ಯನುಕೋಟಿ ಭಾರತೀಯರು ನರಳುತ್ತಿರುವರೋ, ಅಲ್ಲಿಯವರೆಗೂ, ದೀನರ ದುಡಿತದಿಂದ ಕೃತವಿದ್ಯನಾದ ಪ್ರತಿಯೊಬ್ಬ ಭಾರತೀಯನೂ ಕುಲಘಾತಕನೆಂದು ಹೇಳುತ್ತೇನೆ.

ವ್ಯಷ್ಟಿಯ ಜೀವನ ಸಮಷ್ಟಿಯ ಜೀವನದಲ್ಲಿದೆ, ವ್ಯಷ್ಟಿಯ ಸುಖ ಸಮಷ್ಟಿಯ ಸುಖದಲ್ಲಿದೆ. ಸಮಷ್ಟಿಯನ್ನು ಬಿಟ್ಟ ವ್ಯಷ್ಟಿಯ ಇರವು ಅಸಂಭವ. ಇದು ನಿತ್ಯ ಸತ್ಯ. ಈ ವಜ್ರ ತಳಹದಿಯ ಮೇಲೆ ಸೃಷ್ಟಿರಚನೆ ನಿಂತಿರುವುದು.

ಸ್ತ್ರೀಯರಲ್ಲಿ ಓರ್ವಳು ಬ್ರಹ್ಮಜ್ಞಾನಿಯಾದರೂ ಆಕೆಯ ವ್ಯಕ್ತಿತ್ವದ ಪ್ರಭಾವದಿಂದ ಸಾವಿರಾರು ಮಂದಿ ಸ್ತ್ರೀಯರು ಸ್ಫೂರ್ತಿ ಹೊಂದಿ, ಸತ್ಯವನ್ನರಿತು ಇಡೀ ದೇಶಕ್ಕೆ ಕಲ್ಯಾಣವಾಗಿ ಸಮಾಜವೂ ಭದ್ರವಾಗುವುದು.

ನೀವು ನಿಜವಾಗಿಯೂ ಪರಿಶುದ್ಧರಾಗಿದ್ದರೆ ಹೊರಗೆ ಕಳಂಕವನ್ನು ಹೇಗೆ ನೋಡುತ್ತೀರಿ? ಏಕೆಂದರೆ ಯಾವುದು ಅಂತರಂಗದಲ್ಲಿದೆಯೋ ಅದೇ ಬಾಹ್ಯದಲ್ಲಿದೆ. ನಮ್ಮಲ್ಲಿ ಮಲಿನತೆಯಿಲ್ಲದೆ ಹೊರಗೆ ಮಲಿನತೆಯನ್ನು ನೋಡಲಾರೆವು. ಇದು ವೇದಾಂತದ ಒಂದು ಅನುಷ್ಠಾನ ಭಾಗ.

— ಸ್ವಾಮಿ ವಿವೇಕಾನಂದ